ಈಶ್ವರಪ್ರಾಪ್ತಿಗಾಗಿ ಸಾಧನೆ : ಖಂಡ ೧

# ಆಧುನಿಕ ವಿಜ್ಞಾನಕ್ಕಿಂತ ಅಧ್ಯಾತ್ಮ ಶ್ರೇಷ್ಠ !

## (ಅಧ್ಯಾತ್ಮದ ಬಗ್ಗೆ ತಪ್ಪು ತಿಳುವಳಿಕೆಗಳ ನಿವಾರಣೆ ಸಹಿತ)

(Spirituality is superior to modern science)

ಕನ್ನಡ (Kannada)


**ಸಂಕಲನಕಾರರು**

**ಹಿಂದೂ ರಾಷ್ಟ್ರದ ಸ್ಥಾಪನೆಯ ಉದ್ಘೋಷಕರು**

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

**ಪೂ. ಸಂದೀಪ ಗಜಾನನ ಆಳಶಿ**



**ಸನಾತನ ಸಂಸ್ಥೆ**



**卐 ಭಾರತೀಯ ಭಾಷೆಗಳಿಗನುಸಾರ ಸನಾತನದ ಗ್ರಂಥಗಳ ಸಂಖ್ಯೆ 卐**

ಮರಾಠಿ ೩೪೩, ಆಂಗ್ಲ ೨೦೧, ಕನ್ನಡ ೧೯೭, ಹಿಂದಿ ೧೯೫, ಗುಜರಾತಿ ೬೮, ತೆಲುಗು ೪೫, ತಮಿಳು ೪೩, ಬಂಗಾಲಿ ೨೯, ಮಲಯಾಳಂ ೨೪, ಒರಿಯಾ ೨೨, ಪಂಜಾಬಿ ೧೩, ನೇಪಾಳಿ ೩ ಮತ್ತು ಅಸ್ಸಾಮಿ ೨

**ಡಿಸೆಂಬರ್ ೨೦೨೩ ರವರೆಗೆ ೧೩ ಭಾಷೆಗಳಲ್ಲಿ ೩೬೪ ಗ್ರಂಥಗಳ ೯೪,೯೩,೦೦೦ ಪ್ರತಿ !**

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ವಿ–ಅಂಚೆ : grant h@sanatan.org

**ಮುಖಪುಟದ ಪರಿಕಲ್ಪನೆ** : ಸೌ. ಜಾಹ್ನವಿ ಶಿಂದೆ ಮತ್ತು ಕು. ಭಾವಿನಿ ಕಪಾಡಿಯಾ

‘ಅಧ್ಯಾತ್ಮ’ ಈ ಮೂಲ ಖಂಡದ (ಮೊದಲ ಆವೃತ್ತಿ : 5.9.1998) ಮೂರು ಆವೃತ್ತಿಗಳು ಪ್ರಕಾಶಿತಗೊಂಡಿವೆ. ಈ ಮೂಲ ಖಂಡವನ್ನು ‘ಆಧುನಿಕ ವಿಜ್ಞಾನಕ್ಕಿಂತ ಅಧ್ಯಾತ್ಮ ಶ್ರೇಷ್ಠ !’ ಮತ್ತು ‘ಅನಂದಪ್ರಾಪ್ತಿಗಾಗಿ ಅಧ್ಯಾತ್ಮ’ ಎಂಬ 2 ಖಂಡಗಳಲ್ಲಿ ವಿಭಜಿಸಲಾಗಿದೆ.

**First Edition** : Shree Ganesh Jayanthi, Kaliyug Varsh 5117
(11th February 2016)

**Seventh Reprint** : Shri Ganesh Jayanti, Kaliyug Varsh 5125
(13th February 2024)

Translated from the original Marathi text ‘Adhunik vidnyanapeksha adhyatma shreshtha !’
ಪ್ರಸ್ತುತ ಗ್ರಂಥವು ಹಿಂದಿ, ಆಂಗ್ಲ ಮತ್ತು ತೆಲುಗು ಭಾಷೆಗಳಲ್ಲೂ ಲಭ್ಯವಿದೆ.

**ಅನುವಾದಕರು** : ಕು. ರಶ್ಮಿ ರಮೇಶ ನಾಯಕ್
ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 80/-

**ISBN** : 978-93-84460-63-1

ॐ ಗ್ರಂಥ ಕ್ರ. : 9

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ಗ್ರಂಥದ ಸಂಕಲನಕಾರರ ಪರಿಚಯ

# ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆಯವರ ಅದ್ವಿತೀಯ ಕಾರ್ಯ ಮತ್ತು ವೈಶಿಷ್ಟ್ಯಗಳ ಸಂಕ್ಷಿಪ್ತ ಪರಿಚಯ !



೧. ಅಧ್ಯಾತ್ಮಪ್ರಸಾರಕ್ಕಾಗಿ 'ಸನಾತನ ಸಂಸ್ಥೆ'ಯ ಸ್ಥಾಪನೆ

೨. ಶೀಘ್ರ ಈಶ್ವರಪ್ರಾಪ್ತಿಗಾಗಿ 'ಗುರುಕೃಪಾಯೋಗ' ಎಂಬ ಸಾಧನಾಮಾರ್ಗದ ನಿರ್ಮಿತಿ : ಇದಕ್ಕನುಸಾರ ಸಾಧನೆ ಮಾಡಿ ೧೦.೧.೨೦೨೪ ರವರೆಗೆ ೧೨೬ ಸಾಧಕರು ಸಂತರಾಗಿದ್ದು, ೧,೦೪೯ ಸಾಧಕರು ಸಂತತ್ವದೆಡೆಗೆ ಮಾರ್ಗಕ್ರಮಣ ಮಾಡುತ್ತಿದ್ದಾರೆ.

೩. ಆಚಾರಧರ್ಮಪಾಲನೆ, ದೇವತೆಗಳು, ಸಾಧನೆ, ಆದರ್ಶ ರಾಷ್ಟ್ರನಿರ್ಮಾಣ, ಧರ್ಮರಕ್ಷಣೆ ಇತ್ಯಾದಿ ವಿವಿಧ ವಿಷಯಗಳ ಬಗ್ಗೆ ವಿಪುಲ ಗ್ರಂಥಗಳ ನಿರ್ಮಿತಿ

೪. ಹಿಂದುತ್ವವಾದಿ ವರ್ತಮಾನಪತ್ರಿಕೆ 'ಸನಾತನ ಪ್ರಭಾತ'ದ ಸಂಸ್ಥಾಪಕ–ಸಂಪಾದಕರು

೫. ಹಿಂದೂ ರಾಷ್ಟ್ರದ (ಈಶ್ವರೀ ರಾಜ್ಯದ) ಸ್ಥಾಪನೆಯ ಉದ್ಘೋಷ (೧೯೯೮)

೬. ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಸಂತರು, ಸಂಪ್ರದಾಯಗಳು, ಹಿಂದುತ್ವವಾದಿಗಳು ಮುಂತಾದವರ ಸಂಘಟನೆ ಹಾಗೂ ಅವರಿಗೆ ಮಾರ್ಗದರ್ಶನ !

**(ಸಂಪೂರ್ಣ ಪರಿಚಯಕ್ಕಾಗಿ ಭೇಟಿ ನೀಡಿ 'www.Sanatan.org/Kannada')**

**ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರು ಸಾಧಕರಿಗೆ ನೀಡಿದ ಭರವಸೆ !**

**ಸ್ಥೂಲದೇಹಕ್ಕಿಹುದು ಸ್ಥಳಕಾಲಗಳ ಪರಿಮಿತಿ ।**
**ಹೇಗಿರಲಿ ಸದಾ ಎಲ್ಲ ಕಡೆಗಳಲ್ಲಿ ॥**
**ಸನಾತನ ಧರ್ಮವಿಹುದು ನನ್ನ ನಿತ್ಯರೂಪ ।**
**ಆ ರೂಪದಲ್ಲಿರುವೆ ಎಲ್ಲ ಕಡೆಗಳಲ್ಲಿ ಸದಾ ॥**

Jayant Balaji Athavale

17.5.1996



**ಪೂ. ಸಂದೀಪ ಗಜಾನನ ಆಳಶಿ**

ಸನಾತನದ ಗ್ರಂಥಗಳ ಅಂತಿಮ ಸಂಕಲನಕಾರರು. ರಾಷ್ಟ್ರ ಜಾಗೃತಿ ಮತ್ತು ಧರ್ಮಪ್ರಸಾರ ಮಾಡುವ ಪ್ರಸಾರಸಾಹಿತ್ಯ (ಉದಾ. ಸನಾತನ ಪಂಚಾಂಗ, ಕರಪತ್ರ) ಹಾಗೂ ಸಾಧನೆ, ರಾಷ್ಟ್ರ ಮತ್ತು ಧರ್ಮ ಇವುಗಳಿಗೆ ಸಂಬಂಧಿಸಿದ ವರ್ತಮಾನಪತ್ರಿಕೆ 'ಸನಾತನ ಪ್ರಭಾತ'ದಲ್ಲಿ ಪ್ರಬೋಧನಾತ್ಮಕ ಲೇಖನವನ್ನು ಬರೆಯುತ್ತಾರೆ.

---

## ಗ್ರಂಥದ ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


**೧. ವ್ಯುತ್ಪತ್ತಿ ಮತ್ತು ಅರ್ಥ** ೮

**೨. ಸಮಾನಾರ್ಥಕ ಶಬ್ದಗಳು** ೯

**೩. ಅಧ್ಯಾತ್ಮದ ಅಧಿಕಾರಿ** ೯

**೪. ಅಧ್ಯಾತ್ಮದ ಬಗ್ಗೆ ತಪ್ಪು ಗ್ರಹಿಕೆಗಳು** ೯

೪ ಐ. ಸಾಧನೆಯ ಬಗ್ಗೆ ತಪ್ಪು ಗ್ರಹಿಕೆಗಳು ೧೬

೪ ಅಂ. ಅಧ್ಯಾತ್ಮವನ್ನು ಕಲಿಸುವವರ ಬಗ್ಗೆ ತಪ್ಪು ಕಲ್ಪನೆ ೨೦

೪ ಕ. ಗುರುಗಳ ಬಗ್ಗೆ ತಪ್ಪು ಕಲ್ಪನೆ ೨೦

**೫. ಅಧ್ಯಾತ್ಮದ ಬಗೆಗಿನ ತಪ್ಪು ತಿಳುವಳಿಕೆಗಳ ಕಾರಣಗಳು** **೨೦**

೫ ಅ. ಸಮಾಜದಲ್ಲಿನ ಗಣ್ಯ ವ್ಯಕ್ತಿಗಳಿಂದಾಗುವ ತಪ್ಪು ಮಾರ್ಗದರ್ಶನ ೨೦

೫ ಆ. ಪ್ರಸಾರ ಮಾಧ್ಯಮಗಳು ಅಜ್ಞಾನವನ್ನು ಪಸರಿಸುವುದು ೨೨

೫ ಇ. ವಿಶ್ವವಿದ್ಯಾಲಯಗಳಿಂದ ಜ್ಞಾನಪ್ರಸಾರಕ್ಕೆ ನಿರ್ಬಂಧ ೨೨

೫ ಉ. ಸರಕಾರದಿಂದ ಪರೋಕ್ಷ ವಿರೋಧ ೨೨

೫ ಎ. ಬುದ್ಧಿಪ್ರಾಮಾಣ್ಯವಾದಿಗಳ ಅಜ್ಞಾನ ಮತ್ತು ಅಂಧಶ್ರದ್ಧೆ ೨೩

**೬. ಮಹತ್ವ** **೨೬**

**೭. ಮಾನವನಿಗೆ ಅಧ್ಯಾತ್ಮದಲ್ಲಿ ಏಕೆ ಆಸಕ್ತಿಯಿರುತ್ತದೆ ?** **೩೦**

**೮. ಇತರ ಶಾಸ್ತ್ರಗಳು ಮತ್ತು ಅಧ್ಯಾತ್ಮಶಾಸ್ತ್ರ** **೩೦**

೮ ಅ. ಮನಸ್ಸಿಗೆ ಸಂಬಂಧಿಸಿದ ಶಾಸ್ತ್ರಗಳು ಮತ್ತು ಅಧ್ಯಾತ್ಮಶಾಸ್ತ್ರ ೩೦

೮ ಆ. ಇತರ ವಿಷಯ ಮತ್ತು ಆಧ್ಯಾತ್ಮದಲ್ಲಿನ ಶಾಶ್ವತ ಸತ್ಯದ ಪ್ರಮಾಣ ೩೫

೮ ಇ. ವಿಜ್ಞಾನ ಮತ್ತು ಅಧ್ಯಾತ್ಮಶಾಸ್ತ್ರ ೩೫

**೯. ಅಧ್ಯಾತ್ಮದ ಅಧ್ಯಯನ ಮಾಡುವಾಗ ಬರುವ ಅಡಚಣೆಗಳು ೫೫**

೯ ಎ. ತುಲನಾತ್ಮಕ ಅಧ್ಯಯನದ ಅಭಾವ ೫೮

**卐 ಅಧ್ಯಾತ್ಮದ ಬಗೆಗಿನ ಟೀಕೆಗಳು ಅಥವಾ ಯೋಗ್ಯ ವಿಚಾರಗಳು ಮತ್ತು ಅವುಗಳ ಖಂಡನೆ ೬೮**

**卐 ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ ! ೭೩**

**卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ೭೮**

## ಪರಾತ್ಪರ ಗುರು ಡಾ. ಜಯಂತ ಆಠವಲೆಯವರ 'ಸಚ್ಚಿದಾನಂದ ಪರಬ್ರಹ್ಮ' ಎಂಬ ಬಿರುದಿನ ಕುರಿತಾದ ವಿವೇಚನೆ !

೧೩.೭.೨೦೨೨ ರಿಂದ 'ಸಪ್ತರ್ಷಿ ಜೀವನಾಡಿಪಟ್ಟಿ'ಯ ವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಯಂತೆ ಪರಾತ್ಪರ ಗುರು ಡಾ. ಆಠವಲೆಯವರನ್ನು 'ಸಚ್ಚಿದಾನಂದ ಪರಬ್ರಹ್ಮ' ಎಂದು ಸಂಬೋಧಿಸಲಾಗುತ್ತಿದೆ. ಇದಕ್ಕೂ ಮೊದಲು ಗ್ರಂಥಗಳಲ್ಲಿ ಅವರನ್ನು 'ಪ.ಪೂ. (ಪರಮ ಪೂಜ್ಯ)' ಮತ್ತು 'ಪರಾತ್ಪರ ಗುರು' ಎಂಬ ಬಿರುದುಗಳಿಂದ ಸಂಬೋಧಿಸಲಾಗಿದೆ. ಇದಕ್ಕನುಸಾರ ಪ್ರಸ್ತುತ ಗ್ರಂಥದ ಮುಖಪುಟದಲ್ಲಿ ಮತ್ತು ಗ್ರಂಥದಲ್ಲಿ ಆವಶ್ಯಕವಿರುವ ಕಡೆ ಹೀಗೆ ಉಲ್ಲೇಖಿಸಲಾಗಿದೆ.

---

## ಸನಾತನದ ಇಬ್ಬರೂ ಸದ್ಗುರುಗಳ ಹೆಸರಿಗೆ ವಿಶಿಷ್ಟ ಆಧ್ಯಾತ್ಮಿಕ ಬಿರುದು ಸೇರಿಸಿರುವುದರ ಹಿಂದಿನ ಕಾರಣ

ನಾಡಿಪಟ್ಟಿವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಗನುಸಾರ ೧೩.೫.೨೦೨೦ ರಿಂದ ಸದ್ಗುರು (ಸೌ.) ಬಿಂದಾ ನೀಲೇಶ ಸಿಂಗಬಾಳರನ್ನು 'ಶ್ರೀಸತ್‌ಶಕ್ತಿ (ಸೌ.) ಬಿಂದಾ ನೀಲೇಶ ಸಿಂಗಬಾಳ' ಮತ್ತು ಸದ್ಗುರು (ಸೌ.) ಅಂಜಲಿ ಮುಕುಲ ಗಾಡಗೀಳರನ್ನು 'ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಮುಕುಲ ಗಾಡಗೀಳ' ಎಂದು ಸಂಬೋಧಿಸಲಾಗುತ್ತಿದೆ. ಈ ಇಬ್ಬರೂ ಸಂತರು ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ಆಧ್ಯಾತ್ಮಿಕ ಉತ್ತರಾಧಿಕಾರಿಗಳಾಗಿದ್ದಾರೆ.

## ಮನೋಗತ

'ಸುಖ ಎಳ್ಳಿನಷ್ಟು ಮತ್ತು ದುಃಖ ಪರ್ವತದಷ್ಟು' ಎಂಬ ಗಾದೆ ಮಾತಿನ ಅನುಭವ ಹೆಚ್ಚಿನ ಜನರಿಗೆ ಇರುತ್ತದೆ. ಕಲಿಯುಗದಲ್ಲಿ ಸಾಮಾನ್ಯವಾಗಿ ಮನುಷ್ಯರ ಜೀವನದಲ್ಲಿ ಸಾಮಾನ್ಯವಾಗಿ ಸುಖವು ಶೇ. ೨೫ ರಷ್ಟು ಮತ್ತು ದುಃಖವು ಶೇ. ೭೫ ರಷ್ಟಿರುತ್ತದೆ. ಕೇವಲ ಮನುಷ್ಯರು ಮಾತ್ರವಲ್ಲ ಇತರ ಪ್ರಾಣಿಗಳ ಪ್ರಯತ್ನವೂ ಹೆಚ್ಚೆಚ್ಚು ಸುಖವನ್ನು ಹೇಗೆ ಪಡೆಯಬೇಕು ಎಂಬುದಕ್ಕಾಗಿಯೇ ಇರುತ್ತದೆ. ಇದಕ್ಕಾಗಿ ಪ್ರತಿಯೊಬ್ಬರೂ ಪಂಚಜ್ಞಾನೇಂದ್ರಿಯಗಳು, ಮನಸ್ಸು ಮತ್ತು ಬುದ್ಧಿಯಿಂದ ವಿಷಯಸುಖವನ್ನು ಉಪಭೋಗಿಸಲು ಪ್ರಯತ್ನಿಸುತ್ತಾರೆ; ಆದರೆ ವಿಷಯ ಸುಖವು ತಾತ್ಕಾಲಿಕ ಹಾಗೂ ಕಡಿಮೆ ಮಟ್ಟದ್ದಾಗಿರುತ್ತದೆ ಮತ್ತು ಆತ್ಮಸುಖವು ಅರ್ಥಾತ್ ಆನಂದವು ಚಿರಂತನ ಮತ್ತು ಅತಿ ಉಚ್ಚಮಟ್ಟದ್ದಾಗಿರುತ್ತದೆ. ಆತ್ಮಸುಖವನ್ನು ಪ್ರಾಪ್ತಗೊಳಿಸಿಕೊಡುವ ವಿಷಯವೆಂದರೆ ಅಧ್ಯಾತ್ಮ. ಆದುದರಿಂದ 'ಸುಖಃ ಚ ನ ವಿನಾ ಧರ್ಮಾತ್ ತಸ್ಮಾತ್ ಧರ್ಮಪರೋ ಭವೇತ್' ಅಂದರೆ ನಿಜವಾದ ಸುಖವು (ಆನಂದವು) ಧರ್ಮಾಚರಣೆಯನ್ನು ಮಾಡದೇ ಸಿಗುವುದಿಲ್ಲ; ಆದುದರಿಂದ ಯಾವಾಗಲೂ ಧರ್ಮಾಚರಣೆಯನ್ನು ಮಾಡಬೇಕು ಎಂದು ಹೇಳಲಾಗಿದೆ. ಅಧ್ಯಾತ್ಮದ ಆಧಾರವನ್ನು ಪಡೆದು, ಅಂದರೆ ಸಾಧನೆಯನ್ನು ಮಾಡಿ ಆತ್ಮಸುಖವನ್ನು ಪಡೆಯಲು ಪ್ರಯತ್ನಿಸಿದಲ್ಲಿ ಲೌಕಿಕ ಮತ್ತು ಪಾರಲೌಕಿಕ ಸುಖವೂ ಪ್ರಾಪ್ತವಾಗುತ್ತದೆ.

ವಿಷಾದವೆಂದರೆ ಅಧ್ಯಾತ್ಮಕ್ಕೆ ಇಷ್ಟೊಂದು ಮಹತ್ವವಿದ್ದರೂ, ಹೆಚ್ಚಿನ ಜನರಿಗೆ ಅಧ್ಯಾತ್ಮದ ಅರ್ಥವೂ ಸರಿಯಾಗಿ ತಿಳಿದಿರುವುದಿಲ್ಲ. ಆದುದರಿಂದ ಅಧ್ಯಾತ್ಮದಂತಹ ಸರ್ವೋಚ್ಚ ಆನಂದ ಮತ್ತು ಸರ್ವಜ್ಞತೆಯನ್ನು ನೀಡುವ ವಿಷಯದ ಕಡೆಗೆ ಬಹಳ ಕಡಿಮೆ ಜನರು ಹೊರಳುತ್ತಾರೆ. ಆನಂದವು ವಿಷಯಸುಖದ ಅನೇಕ ಪಟ್ಟಿರುತ್ತದೆ ಎಂಬುದು ತಿಳಿದರೆ, ವಿಷಯಸುಖಕ್ಕಿಂತ ಆನಂದಪ್ರಾಪ್ತಿಗಾಗಿ ಯಾರಾದರೂ ಪ್ರಯತ್ನಿಸಬಹುದು. ಇಂತಹ ಪ್ರಯತ್ನಗಳಾಗಬೇಕೆಂಬ ಉದ್ದೇಶವನ್ನಿಟ್ಟುಕೊಂಡೇ ಈ ಗ್ರಂಥ ಬರೆಯಲಾಗಿದೆ. ಅಧ್ಯಾತ್ಮದ ಅಧ್ಯಯನ ಮಾಡುವಾಗ ಯಾವ ಅಡಚಣೆಗಳು ಬರುತ್ತವೆ ಎಂಬುದರ ವಿವೇಚನೆಯನ್ನೂ ಈ ಗ್ರಂಥದಲ್ಲಿ ಮಾಡಲಾಗಿದೆ.

ಅಧ್ಯಾತ್ಮವು ಕೇವಲ ಬುದ್ಧಿಯ ಸ್ತರದಲ್ಲಿ ತಿಳಿದುಕೊಳ್ಳುವ ವಿಷಯವಲ್ಲ, ಅದು ಪ್ರತ್ಯಕ್ಷ ಕೃತಿ ಮಾಡಿ ಅನುಭೂತಿಯನ್ನು ಪಡೆಯುವ ವಿಷಯವಾಗಿದೆ. ಈ ಗ್ರಂಥವನ್ನು ಓದಿ ಕೆಲವರಾದರೂ ಸಾಧನೆಯನ್ನು ಪ್ರಾರಂಭಿಸಬೇಕು ಮತ್ತು ಸಾಧನೆಯಿಂದ ಅವರ ಅಂತರ್ಯದಲ್ಲಿ ಆನಂದದ ಝರಿಯು ಬೇಗನೇ ನಿರ್ಮಾಣವಾಗಬೇಕು ಎಂದು ಗುರುಚರಣಗಳಲ್ಲಿ ಪ್ರಾರ್ಥನೆ. – **ಸಂಕಲನಕಾರರು**